# ಲಲಿತಕಲಾ ಅಕಾಡಮಿ (ವ್ಯವಸ್ಥಾಪನೆಯನ್ನು ವಹಿಸಿಕೊಳ್ಳುವಿಕೆ) ಅಧಿನಿಯಮ, 1997

(1997ರ ಅಧಿನಿಯಮ ಸಂಖ್ಯೆ 17)

[**23.02.2004ರ ಭಾರತ ರಾಜಪತ್ರದ IXನೇ ಭಾಗದ, 1ನೇ ವಿಭಾಗದ, 28ನೇ ಸಂಪುಟದ 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 4 ರಿಂದ 9ರ ವರೆಗಿನ ಪುಟಗಳಲ್ಲಿ ಪ್ರಕಟಿತ**]

**ಪ್ರಕರಣಗಳ ಅನುಕ್ರಮಣಿಕೆ**

**ಪ್ರಕರಣಗಳು:**

**ಅಧ್ಯಾಯ – I**

**ಪ್ರಾರಂಭಿಕ**

1. ಚಿಕ್ಕ ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು

**ಅಧ್ಯಾಯ – II**

**ಲಲಿತಕಲಾ ಅಕಾಡಮಿಯ ವ್ಯವಸ್ಥಾಪನೆಯನ್ನು ವಹಿಸಿಕೊಳ್ಳುವಿಕೆ**

3. ಸೊಸೈಟಿಯ ವ್ಯವಸ್ಥಾಪನೆ
4. ಸೊಸೈಟಿಯ ಆಡಳಿತಗಾರ
5. ಅವಧಿಗೆ ಮುಂಚೆ ಕೊನೆಗೊಂಡ ಕರಾರಿನ ಸಂಬಂಧದಲ್ಲಿ ಪರಿಹಾರಕ್ಕೆ ಹಕ್ಕು ಇಲ್ಲದಿರುವುದು
6. ಸೊಸೈಟಿಯ ಆಡಳಿತವನ್ನು ಪರಿತ್ಯಜಿಸುವುದು
7. 1860ರ 21ನೇ ಅಧಿನಿಯಮದ ಅನ್ವಯ

**ಅಧ್ಯಾಯ – III**

**ಸಂಕೀರ್ಣ**

8. ದಂಡಗಳು
9. ಕಂಪನಿಗಳಿಂದ ಅಪರಾಧಗಳು
10. ಅಧಿನಿಯಮದ ಪ್ರವರ್ತನೆಯ ಅವಧಿಯನ್ನು ಹೊರತುಪಡಿಸುವುದು
11. ಅಧಿನಿಯಮವು ಅಧ್ಯಾರೋಹಿ ಪರಿಣಾಮ ಹೊಂದಿರುವುದು
12. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ
13. ದುರ್ಭಾವನೆಯಿಂದ ಮಾಡಿರುವ ಕರಾರುಗಳನ್ನು ರದ್ದುಗೊಳಿಸಬಹುದು ಅಥವಾ ವ್ಯತ್ಯಸ್ಥಗೊಳಿಸಬಹುದು
14. ಉದ್ಯೋಗದ ಕರಾರನ್ನು ಕೊನೆಗೊಳಿಸುವ ಅಧಿಕಾರ
15. ನಿಯಮ ರಚಾನಾಧಿಕಾರ
16. ನಿರಸನ ಮತ್ತು ಉಳಿಸುವಿಕೆ

# 17. ಲಲಿತಕಲಾ ಅಕಾಡಮಿ (ವ್ಯವಸ್ಥಾಪನೆಯನ್ನು ವಹಿಸಿಕೊಳ್ಳುವಿಕೆ) ಅಧಿನಿಯಮ, 1997

(1997ರ ಅಧಿನಿಯಮ ಸಂಖ್ಯೆ 17)

[25ನೇ ಮಾರ್ಚ್, 1997]

ಸಾರ್ವಜನಿಕ ಹಿತಾಸಕ್ತಿಗಾಗಿ ಒಂದು ಪರಿಮಿತ ಅವಧಿಯವರೆಗೆ ಲಲಿತಕಲಾ ಅಕಾಡಮಿಯ ವ್ಯವಸ್ಥಾಪನೆಯನ್ನು ವಹಿಸಿಕೊಳ್ಳುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಪಟ್ಟ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.

ಲಲಿತಕಲಾ ಅಕಾಡಮಿಯನ್ನು ಚಿತ್ರಕಲೆ, ರೇಖಾಚಿತ್ರ, ಕೆತ್ತನೆ ಕೆಲಸ ಮುಂತಾದ ದೃಶ್ಯ ಕಲೆಗಳಿಗೆ ಉತ್ತೇಜನ ನೀಡುವ ಮತ್ತು ಸಂವರ್ಧಿಸುವ ಸಲುವಾಗಿ ಆಗಸ್ಟ್ 5, 1954 ರಂದು ಅಂಗೀಕರಿಸಿದ ಸಂಸದೀಯ ನಿರ್ಣಯದಿಂದ ಭಾರತ ಸರ್ಕಾರವು ದೃಶ್ಯ ಕಲೆಗಳ ಕ್ಷೇತ್ರದಲ್ಲಿ ಒಂದು ಶೃಂಗ ಸಾಂಸ್ಕೃತಿಕ ನಿಕಾಯವನ್ನು ಸ್ಥಾಪಿಸಿರುವುದರಿಂದ;

ಅಲ್ಲದೆ, ಲಲಿತಕಲಾ ಅಕಾಡಮಿಯನ್ನು ಮಾರ್ಚ್ 11, 1957 ರಂದು ಸೊಸೈಟಿಗಳ ನೋಂದಣಿ ಅಧಿನಿಯಮ, 1860ರ ಮೇರೆಗೆ ಒಂದು ಸೊಸೈಟಿಯಾಗಿ ನೋಂದಾಯಿಸಲಾಗಿರುವುದರಿಂದ;

ಅಲ್ಲದೆ, ಭಾರತ ಸರ್ಕಾರವು ಸಂಸ್ಥೆಗೆ ನಿಧಿ ಒದಗಿಸುವ ಏಕಮಾತ್ರ ಏಜೆನ್ಸಿಯಾಗಿದ್ದರೂ ಸಹ, ಅಕಾಡಮಿಯು ತನ್ನ ಚಟುವಟಿಕೆಗಳ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ಸಂಪೂರ್ಣ ಸ್ವಾಯತ್ತತೆಯನ್ನು ಹೊಂದಿರುವುದರಿಂದ;

ಅಲ್ಲದೆ, ಲಲಿತಕಲಾ ಅಕಾಡಮಿಯು ನಿಧಿಗಳನ್ನು ದುರುಪಯೋಗಪಡಿಸಿಕೊಂಡ ಬಗ್ಗೆ ಸಂಸತ್ತಿನ ಮಾನ್ಯ ಸದಸ್ಯರೂ ಸೇರಿದಂತೆ ವಿವಿಧ ಕ್ಷೇತ್ರಗಳಿಂದ ಸ್ವೀಕರಿಸಿದ ದೂರುಗಳಿಗೆ ಅನುಸಾರವಾಗಿ, ಭಾರತ ಸರ್ಕಾರವು ಮಾರ್ಚ್ 24, 1988 ರಂದು ಕೈಗೊಂಡ ನಿರ್ಣಯದ ಮೂಲಕ ಶ್ರೀ ಪಿ.ಎನ್.ಹಸ್ಕರ್ ಇವರ ಅಧ್ಯಕ್ಷತೆಯಲ್ಲಿ ಲಲಿತಕಲಾ ಅಕಾಡಮಿಯು ಸೇರಿದಂತೆ ರಾಷ್ಟ್ರೀಯ ಅಕಾಡಮಿಗಳ ಕಾರ್ಯನಿರ್ವಹಣೆಯನ್ನು ಪರಿಶೀಲಿಸಲು ಒಂದು ಸಮಿತಿಯನ್ನು ರಚಿಸಿತು ಮತ್ತು ಸದರಿ ಸಮಿತಿಯು, ಸದರಿ ಅಕಾಡಮಿಯ ಆಡಳಿತ ನಿರ್ವಹಣೆಯ ವ್ಯವಹಾರಗಳನ್ನು ವಿವರವಾಗಿ ಪರಿಶೀಲಿಸಿದ ನಂತರ ಕಲಾವಿದರ ಮತಕ್ಷೇತ್ರದ ಸಾಮಾನ್ಯ ಪರಿಷತ್ತು, ಕಾರ್ಯಕಾರಿ ಮಂಡಲಿ ಮತ್ತು ಮತದಾರರ ಪಟ್ಟಿಯನ್ನು ಪುನರ್ ರಚಿಸುವಂತೆ ಶಿಫಾರಸುಗಳನ್ನು ಮಾಡಿರುವುದರಿಂದ;

ಅಲ್ಲದೆ, ಲಲಿತಕಲಾ ಅಕಾಡಮಿಯ ವ್ಯವಸ್ಥಾಪನೆಗೆ ಸಂಬಂಧಿಸಿದಂತೆ ಉಂಟಾಗಿರುವ ತೀವ್ರ ತೊಂದರೆಗಳ ದೃಷ್ಟಿಯಿಂದ ಅದರ ವ್ಯವಸ್ಥಾಪನೆಯನ್ನು ಒಂದು ಪರಿಮಿತ ಅವಧಿಯವರೆಗೆ ವಹಿಸಿಕೊಳ್ಳುವುದು ಅವಶ್ಯಕವಾಗಿದ್ದು, ಲಲಿತಕಲಾ ಅಕಾಡಮಿಯ ವ್ಯವಸ್ಥಾಪನೆಯನ್ನು ವಹಿಸಿಕೊಳ್ಳುವಲ್ಲಿ ಉಂಟಾಗುವ ಯಾವುದೇ ವಿಳಂಬವು ಅಕಾಡಮಿಯ ಹಿತಾಸಕ್ತಿಗಳಿಗೆ ಮತ್ತು ಉದ್ದೇಶಗಳಿಗೆ ಹೆಚ್ಚು ಹಾನಿಕರವಾಗುವುದೆಂದು ಭಾವಿಸಲಾಗಿರುವುದರಿಂದ;

ಭಾರತ ಗಣರಾಜ್ಯದ ನಲವತ್ತೆಂಟನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು : –

## ಅಧ್ಯಾಯ – I

## ಪ್ರಾರಂಭಿಕ

**1. ಚಿಕ್ಕ ಹೆಸರು ಮತ್ತು ಪ್ರಾರಂಭ.**– (1) ಈ ಅಧಿನಿಯಮವನ್ನು ಲಲಿತಕಲಾ ಅಕಾಡಮಿ (ವ್ಯವಸ್ಥಾಪನೆಯನ್ನು ವಹಿಸಿಕೊಳ್ಳುವಿಕೆ) ಅಧಿನಿಯಮ, 1997 ಎಂದು ಕರೆಯತಕ್ಕದ್ದು.

(2) ಇದು ಜನವರಿ 24, 1997 ರಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

**2. ಪರಿಭಾಷೆಗಳು.**– ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಆಡಳಿತಗಾರ" ಎಂದರೆ 4ನೇ ಪ್ರಕರಣದ ಮೇರೆಗೆ ಆಡಳಿತಗಾರನೆಂದು ನೇಮಕಗೊಂಡ ಒಬ್ಬ ವ್ಯಕ್ತಿ;

(ಬಿ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ನಿಯಮಿಸಲಾದುದು;

(ಸಿ) "ಸೊಸೈಟಿಗಳ ನೋಂದಣಿ ಅಧಿನಿಯಮ" ಎಂದರೆ ದೆಹಲಿಯ ರಾಷ್ಟ್ರೀಯ ರಾಜಧಾನಿ ರಾಜ್ಯಕ್ಷೇತ್ರದಲ್ಲಿ ಜಾರಿಯಲ್ಲಿರುವ ಸೊಸೈಟಿ ನೋಂದಣಿ ಅಧಿನಿಯಮ, 1860 (1860ರ 21);

(ಡಿ) "ಸೊಸೈಟಿ" ಎಂದರೆ ಸೊಸೈಟಿಗಳ ನೋಂದಣಿ ಅಧಿನಿಯಮದ ಮೇರೆಗೆ ನೋಂದಾಯಿಸಲಾದ ಸೊಸೈಟಿಯಾಗಿರುವ ಲಲಿತಕಲಾ ಅಕಾಡಮಿ;

(ಇ) ಇದರಲ್ಲಿ ಬಳಸಲಾಗಿದ್ದು ಪರಿಭಾಷಿಸಿರದ, ಆದರೆ ಸೊಸೈಟಿಗಳ ನೋಂದಣಿ ಅಧಿನಿಯಮದಲ್ಲಿ ಪರಿಭಾಷಿಸಿರುವ ಪದಗಳು ಮತ್ತು ಪದಾವಳಿಗಳು ಆ ಅಧಿನಿಯಮದಲ್ಲಿ ಅವುಗಳಿಗೆ ಅನುಕ್ರಮವಾಗಿ ನೀಡಿರುವ ಅರ್ಥವನ್ನೇ ಹೊಂದಿರತಕ್ಕದ್ದು.

## ಅಧ್ಯಾಯ – II

## ಲಲಿತಕಲಾ ಅಕಾಡಮಿಯ ವ್ಯವಸ್ಥಾಪನೆಯನ್ನು ವಹಿಸಿಕೊಳ್ಳುವಿಕೆ

**3. ಸೊಸೈಟಿಯ ವ್ಯವಸ್ಥಾಪನೆ.**– (1) ಈ ಅಧಿನಿಯಮವು ಪ್ರಾರಂಭವಾದ ದಿನದಂದು ಮತ್ತು ಅಂದಿನಿಂದ ಹಾಗೂ ಆ ತರುವಾಯ ಮೂರು ವರ್ಷಗಳ ಅವಧಿಯವರೆಗೆ ಸೊಸೈಟಿಯ ವ್ಯವಸ್ಥಾಪನೆಯು ಕೇಂದ್ರ ಸರ್ಕಾರದಲ್ಲಿ ನಿಹಿತವಾಗಿರತಕ್ಕದ್ದು:

ಪರಂತು, ಕೇಂದ್ರ ಸರ್ಕಾರವು ಸೊಸೈಟಿಯ ಸಮರ್ಪಕ ವ್ಯವಸ್ಥಾಪನೆಯನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಅಂತಹ ವ್ಯವಸ್ಥಾಪನೆಯು, ಸದರಿ ಮೂರು ವರ್ಷಗಳ ಅವಧಿಯು ಮುಕ್ತಾಯವಾದ ತರುವಾಯವೂ ಕೇಂದ್ರ ಸರ್ಕಾರದಲ್ಲಿ ಮುಂದುವರಿಯುವುದು ಯುಕ್ತವೆಂದು ಅಭಿಪ್ರಾಯಪಟ್ಟಲ್ಲಿ, ಅದು ಅಂತಹ ವ್ಯವಸ್ಥಾಪನೆಯು ತಾನು ಸೂಕ್ತವೆಂದು ಭಾವಿಸುವಂಥ ಒಂದು ಸಲಕ್ಕೆ ಒಂದು ವರ್ಷವನ್ನು ಮೀರದಂಥ ಅವಧಿಯವರೆಗೆ ಮುಂದುವರಿಯಲು ಕಾಲಕಾಲಕ್ಕೆ ನಿರ್ದೇಶನವನ್ನು ನೀಡಬಹುದು. ಆದಾಗ್ಯೂ, ಅಂತಹ ವ್ಯವಸ್ಥಾಪನೆಯನ್ನು ಕೇಂದ್ರ ಸರ್ಕಾರದಲ್ಲಿ ನಿಹಿತಗೊಳ್ಳುವುದನ್ನು ಮುಂದುವರೆಸುವ ಒಟ್ಟು ಅವಧಿಯು ಯಾವುದೇ ಸಂದರ್ಭದಲ್ಲೂ ಐದು ವರ್ಷಗಳನ್ನು ಮೀರತಕ್ಕದ್ದಲ್ಲ.

(2) ಸೊಸೈಟಿಯ ವ್ಯವಸ್ಥಾಪನೆಯು, ಎಲ್ಲಾ ಆಸ್ತಿಗಳು, ಹಕ್ಕುಗಳು, ಗುತ್ತಿಗೆ ಹಿಡುವಳಿಗಳು, ಅಧಿಕಾರಗಳು, ಪ್ರಾಧಿಕಾರಗಳು ಮತ್ತು ವಿಶೇಷ ಅಧಿಕಾರಗಳು ಹಾಗೂ ಜಮೀನುಗಳು, ಕಟ್ಟಡಗಳು, ಕಲಾಕೃತಿಗಳು, ಕಾರ್ಯಾಗಾರಗಳು, ಪರಿಯೋಜನೆಗಳು, ದಾಸ್ತಾನು ಮಳಿಗೆಗಳು, ಲಿಖಿತಗಳು, ಗ್ರಂಥಾಲಯ, ಯಂತ್ರೋಪಕರಣ, ಆಟೋಮೊಬೈಲ್‌ಗಳು ಮತ್ತು ಇತರ ವಾಹನಗಳು, ನಗದು ಶಿಲ್ಕು, ಮೀಸಲು ನಿಧಿ, ಹೂಡಿಕೆಗಳು ಮತ್ತು ಪುಸ್ತಕ ಋಣ–ಇವುಗಳೂ ಒಳಗೊಂಡಂತೆ ಎಲ್ಲ ಚರ ಮತ್ತು ಸ್ಥಿರ ಸ್ವತ್ತು ಮತ್ತು ಈ ಅಧಿನಿಯಮವು ಪ್ರಾರಂಭವಾಗುವ ನಿಕಟಪೂರ್ವದಲ್ಲಿ ಸೊಸೈಟಿಯ ಒಡೆತನ, ಸ್ವಾಧೀನ, ಅಧಿಕಾರ ಅಥವಾ

ನಿಯಂತ್ರಣದಲ್ಲಿದ್ದಂಥ ಸ್ವತ್ತಿನಿಂದ ಉದ್ಭವಿಸುವ ಇತರ ಎಲ್ಲಾ ಹಕ್ಕುಗಳು ಮತ್ತು ಹಿತಾಸಕ್ತಿಗಳು ಮತ್ತು ಅಂತಹ ಎಲ್ಲಾ ಲೆಕ್ಕ ಪುಸ್ತಕಗಳು, ರಿಜಿಸ್ಟರುಗಳು, ನಕಾಶೆಗಳು, ಯೋಜನೆಗಳು ಮತ್ತು ಅದಕ್ಕೆ ಸಂಬಂಧಿಸಿದ ಯಾವುದೇ ಸ್ವರೂಪದಲ್ಲಿರುವ ಎಲ್ಲಾ ಇತರ ದಸ್ತಾವೇಜುಗಳು - ಇವುಗಳನ್ನು ಒಳಗೊಳ್ಳುವುದೆಂದು ಭಾವಿಸತಕ್ಕದ್ದು.

(3) ಸೊಸೈಟಿಯ ವ್ಯವಸ್ಥಾಪನೆಗೆ ಮತ್ತು ಸೊಸೈಟಿಯ ವ್ಯವಹಾರಗಳಿಗೆ ಸಂಬಂಧಿಸುವಷ್ಟರ ಮಟ್ಟಿಗೆ ಮತ್ತು ಈ ಅಧಿನಿಯಮ ಪ್ರಾರಂಭವಾಗುವ ನಿಕಟ ಪೂರ್ವದಲ್ಲಿ ಜಾರಿಯಲ್ಲಿದ್ದ ಯಾವುದೇ ವ್ಯಕ್ತ ಅಥವಾ ಇಂಗಿತ ಕರಾರು ಅಥವಾ ಇತರ ವ್ಯವಸ್ಥೆಯು ಹಾಗೆ ಅಂತಹ ಪ್ರಾರಂಭದ ನಂತರ ಕೊನೆಗೊಂಡಿರುವುದಾಗಿ ಭಾವಿಸತಕ್ಕದ್ದು.

(4) ಈ ಅಧಿನಿಯಮದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ, ಸಂದರ್ಭಾನುಸಾರ, ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿ ಅಥವಾ ಗೌರವ ಕಾರ್ಯದರ್ಶಿಯಾಗಿ ಹುದ್ದೆಗಳನ್ನು ಹೊಂದಿರುವ ವ್ಯಕ್ತಿಗಳೂ ಸೇರಿದಂತೆ ಸೊಸೈಟಿಯ ಆಡಳಿತದ ಪ್ರಭಾರದಲ್ಲಿರುವ ಎಲ್ಲಾ ವ್ಯಕ್ತಿಗಳು ಮತ್ತು ಸಾಮಾನ್ಯ ಪರಿಷತ್ತಿನ, ಕಾರ್ಯಕಾರಿ ಮಂಡಲಿಯ, ಹಣಕಾಸು ಸಮಿತಿಯ ಮತ್ತು ಸೊಸೈಟಿಯ ಎಲ್ಲ ಇತರ ಸಮಿತಿಗಳ ಸದಸ್ಯರು, ಅಂತಹ ಪ್ರಾರಂಭದಂದು ತಮ್ಮ ಹುದ್ದೆಗಳನ್ನು ತೆರವು ಮಾಡಿರುವುದಾಗಿ ಭಾವಿಸತಕ್ಕದ್ದು.

**4. ಸೊಸೈಟಿಯ ಆಡಳಿತಗಾರ.**- (1) ಈ ಅಧಿನಿಯಮದ ಪ್ರಾರಂಭದಿಂದ ಕೇಂದ್ರ ಸರ್ಕಾರವು ಸೊಸೈಟಿಯ ಆಡಳಿತವನ್ನು ವಹಿಸಿಕೊಳ್ಳುವ ಉದ್ದೇಶಕ್ಕಾಗಿ ಅದರ ಆಡಳಿತಗಾರನಾಗಿ ಒಬ್ಬ ವ್ಯಕ್ತಿಯನ್ನು ನೇಮಕ ಮಾಡತಕ್ಕದ್ದು ಮತ್ತು ಆ ಆಡಳಿತಗಾರನು ಕೇಂದ್ರ ಸರ್ಕಾರದ ಪರವಾಗಿ ಸೊಸೈಟಿಯ ವ್ಯವಸ್ಥಾಪನೆಯನ್ನು ನಿರ್ವಹಿಸತಕ್ಕದ್ದು.

(2) ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮುಂಚೆ ಚಲಾಯಿಸಲಾಗುತ್ತಿದ್ದ ಸೊಸೈಟಿಯ ಹಣಕಾಸು ಸಮಿತಿಯ ಪ್ರಕಾರ್ಯಗಳನ್ನು ಕೇಂದ್ರ ಸರ್ಕಾರವು ನೇಮಕಮಾಡುವ ಆ ಸರ್ಕಾರದ ಒಬ್ಬ ಅಧಿಕಾರಿಯು ಚಲಾಯಿಸತಕ್ಕದ್ದು.

(3) ಕೇಂದ್ರ ಸರ್ಕಾರವು, ತಾನು ಅಪೇಕ್ಷಣೀಯವೆಂದು ಭಾವಿಸಬಹುದಾದಂಥ ಆಡಳಿತಗಾರನ ಅಧಿಕಾರ ಮತ್ತು ಕರ್ತವ್ಯಗಳ ಬಗ್ಗೆ ನಿರ್ದೇಶನಗಳನ್ನು (ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಇತರ ಪ್ರಾಧಿಕಾರದ ಮುಂದೆ ಇರುವ ಯಾವುದೇ ಕಾನೂನು ವ್ಯವಹರಣೆಯನ್ನು ಆರಂಭಿಸಲು, ಪ್ರತಿಪಾದಿಸಲು ಅಥವಾ ಮುಂದುವರೆಸಲು ನೀಡುವ ನಿರ್ದೇಶನಗಳು ಸೇರಿದಂತೆ) ನೀಡಬಹುದು ಮತ್ತು ಆಡಳಿತಗಾರನು ಸೊಸೈಟಿಯ ವ್ಯವಸ್ಥಾಪನೆಯನ್ನು ಯಾವ ರೀತಿ ನಡೆಸಬೇಕೆಂಬ ಬಗ್ಗೆ ಯಾವುದೇ ಸಮಯದಲ್ಲಿ ಅಥವಾ ಅಂತಹ ವ್ಯವಸ್ಥಾಪನೆಯ ಕ್ರಮದಲ್ಲಿ ಉಂಟಾಗುವ ಯಾವುದೇ ವಿಷಯಗಳ ಸಂಬಂಧದಲ್ಲಿ ಸೂಚನೆಗಳನ್ನು ಕೋರಿ ಕೇಂದ್ರ ಸರ್ಕಾರಕ್ಕೆ ಅರ್ಜಿ ಸಲ್ಲಿಸಬಹುದು.

(4) ಈ ಅಧಿನಿಯಮದ ಇತರ ಉಪಬಂಧಗಳಿಗೆ ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳಿಗೆ ಮತ್ತು ಕೇಂದ್ರ ಸರ್ಕಾರದ ನಿಯಂತ್ರಣಕ್ಕೆ ಒಳಪಟ್ಟು, ಸೊಸೈಟಿಗಳ ನೋಂದಣಿ ಅಧಿನಿಯಮ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, ಆಡಳಿತಗಾರನು, ಸೊಸೈಟಿಯ ವ್ಯವಸ್ಥಾಪನೆಯ ಸಂಬಂಧದಲ್ಲಿ, ಸಾಮಾನ್ಯ ಪರಿಷತ್ತಿನ ಅಧಿಕಾರಗಳನ್ನು, ಅಥವಾ ಸಂದರ್ಭಾನುಸಾರ, ಅಂತಹ ಸೊಸೈಟಿಯ ಯಾವುದೇ ಆಸ್ತಿ ಅಥವಾ ಸ್ವತ್ತುಗಳನ್ನು ವಿಲೆ ಮಾಡುವ ಅಧಿಕಾರವೂ ಸೇರಿದಂತೆ ಕಾರ್ಯಕಾರಿ ಮಂಡಲಿಯ ಅಧಿಕಾರಗಳನ್ನು, ಅಂಥ ಅಧಿಕಾರಗಳನ್ನು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಸೊಸೈಟಿಯ ಜ್ಞಾಪನ ಪತ್ರದಿಂದ ಮತ್ತು ನಿಯಮಗಳು ಹಾಗೂ ವಿನಿಯಮಗಳಿಂದ ಅಥವಾ ಯಾವುದೇ ಇತರ ಮೂಲದಿಂದ ಪಡೆದಿರಲಿ, ಚಲಾಯಿಸಲು ಹಕ್ಕುಳ್ಳವರಾಗಿರತಕ್ಕದ್ದು.

(5) ಸೊಸೈಟಿಯ ಭಾಗವಾಗಿರುವ ಯಾವುದೇ ಸ್ವತ್ತಿನ ಸ್ವಾಧೀನತೆ, ಅಭಿರಕ್ಷೆ ಅಥವಾ ನಿಯಂತ್ರಣವನ್ನು ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಯೂ ಅಂಥ ಸ್ವತ್ತನ್ನು ಆಡಳಿತಗಾರನಿಗೆ ವಶಾವಣೆ ಮಾಡತಕ್ಕದ್ದು.

(6) ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮುಂಚೆ ಸೊಸೈಟಿಯ ವ್ಯವಸ್ಥಾಪನೆಯ ಪ್ರಭಾರದಲ್ಲಿದ್ದ ವ್ಯಕ್ತಿಗಳ ನಿರ್ಣಯಗಳನ್ನು ಒಳಗೊಂಡಿರುವ ನಡವಳಿ ಪುಸ್ತಕಗಳೂ ಸೇರಿದಂತೆ, ಸೊಸೈಟಿಯ ವ್ಯವಸ್ಥಾಪನೆಗೆ ಸಂಬಂಧಿಸಿದ ಯಾವುದೇ ಪುಸ್ತಕಗಳು, ಕಾಗದ ಪತ್ರಗಳು, ಕಲಾಕೃತಿಗಳು ಅಥವಾ ಇತರ ದಸ್ತಾವೇಜುಗಳು ಸೊಸೈಟಿಯ ವ್ಯವಸ್ಥಾಪನೆಗೆ ಸಂಬಂಧಿಸಿದ ಚಾಲ್ತಿ ಚೆಕ್ ಪುಸ್ತಕಗಳು, ಯಾವುದೇ ಕಾಗದ ಪತ್ರಗಳು, ಜ್ಞಾಪನ ಪತ್ರಗಳು, ಟಿಪ್ಪಣಿಗಳು ಹಾಗೂ ತನ್ನ ಮತ್ತು ಸೊಸೈಟಿಯ ನಡುವಣ ಇತರ ಪತ್ರ ವ್ಯವಹಾರಗಳನ್ನು ಈ ಅಧಿನಿಯಮವು ಪ್ರಾರಂಭವಾದ ದಿನದಂದು ತನ್ನ ಸ್ವಾಧೀನ ಅಥವಾ ನಿಯಂತ್ರಣದಲ್ಲಿ ಹೊಂದಿರುವ ಯಾರೇ ವ್ಯಕ್ತಿಯು ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಆ ಪುಸ್ತಕಗಳು, ಕಾಗದ ಪತ್ರಗಳು, ಕಲಾಕೃತಿಗಳು ಹಾಗೂ ಇತರ ದಸ್ತಾವೇಜುಗಳನ್ನು (ಅಂಥ ನಡವಳಿ ಪುಸ್ತಕಗಳು, ಚೆಕ್ ಪುಸ್ತಕಗಳು, ಕಾಗದ ಪತ್ರಗಳು, ಜ್ಞಾಪನ ಪತ್ರಗಳು, ಟಿಪ್ಪಣಿಗಳು ಮತ್ತು ಇತರ ಪತ್ರ ವ್ಯವಹಾರಗಳೂ ಸೇರಿ) ಆಡಳಿತಗಾರನಿಗೆ ಒಪ್ಪಿಸಲು ಜವಾಬ್ದಾರನಾಗಿರತಕ್ಕದ್ದು.

(7) ಈ ಅಧಿನಿಯಮದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಸೊಸೈಟಿಯ ಆಡಳಿತದ ಪ್ರಭಾರದಲ್ಲಿದ್ದ ಯಾರೇ ವ್ಯಕ್ತಿಯು ಆ ದಿನಾಂಕದಿಂದ ಹತ್ತು ದಿನಗಳ ಒಳಗಾಗಿ ಅಥವಾ ಕೇಂದ್ರ ಸರ್ಕಾರವು ಈ ಬಗ್ಗೆ ಅನುಮತಿಸಬಹುದಾದ ಹೆಚ್ಚಿನ ಅವಧಿಯ ಒಳಗಾಗಿ, ಈ ಅಧಿನಿಯಮದ ಪ್ರಾರಂಭದ ನಿಕಟಪೂರ್ವದಲ್ಲಿ ಸೊಸೈಟಿಯ ಭಾಗವಾಗಿರುವ (ಪುಸ್ತಕ ಋಣಗಳು ಮತ್ತು ಹೂಡಿಕೆಗಳು ಮತ್ತು ಸಾಮಾನುಗಳ ವಿವರಗಳು ಸೇರಿದಂತೆ) ಎಲ್ಲಾ ಸ್ವತ್ತುಗಳ ಮತ್ತು ಆಸ್ತಿಗಳ ಸಂಪೂರ್ಣ ಪಟ್ಟಿಯನ್ನು ಮತ್ತು ಅಂತಹ ಪ್ರಾರಂಭದ ನಿಕಟಪೂರ್ವದಲ್ಲಿರುವ ಸೊಸೈಟಿಯ ಆಡಳಿತದ ಸಂಬಂಧದಲ್ಲಿದ್ದ ಎಲ್ಲಾ ದಾಯಿತ್ವ ಮತ್ತು ಹೊಣೆಗಾರಿಕೆಗಳನ್ನು ಹಾಗೂ ಸೊಸೈಟಿಯು ತನ್ನ ಆಡಳಿತಕ್ಕೆ ಸಂಬಂಧಪಟ್ಟಂತೆ ಅಂತಹ ಪ್ರಾರಂಭದ ನಿಕಟಪೂರ್ವದಲ್ಲಿ ಮಾಡಿಕೊಂಡಿದ್ದ ಎಲ್ಲಾ ಒಪ್ಪಂದಗಳನ್ನು ಆಡಳಿತಗಾರನಿಗೆ ಒದಗಿಸತಕ್ಕದ್ದು.

(8) ಆಡಳಿತಗಾರನು ಕೇಂದ್ರ ಸರ್ಕಾರವು ನಿಗದಿಪಡಿಸಬಹುದಾದಂಥ ಸಂಭಾವನೆಯನ್ನು ಸೊಸೈಟಿಯ ನಿಧಿಗಳಿಂದ ಸ್ವೀಕರಿಸತಕ್ಕದ್ದು.

**5. ಅವಧಿಗೆ ಮುಂಚೆ ಕೊನೆಗೊಂಡ ಕರಾರಿನ ಸಂಬಂಧದಲ್ಲಿ ಪರಿಹಾರಕ್ಕೆ ಹಕ್ಕು ಇಲ್ಲದಿರುವುದು.–** (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಯಾವ ವ್ಯಕ್ತಿಯ ಸಂಬಂಧದಲ್ಲಿ 3ನೇ ಪ್ರಕರಣದ (3)ನೇ ಉಪ-ಪ್ರಕರಣದಲ್ಲಿ ಒಳಗೊಂಡಿರುವ ಉಪಬಂಧಗಳ ಕಾರಣದಿಂದಾಗಿ ವ್ಯವಸ್ಥಾಪನೆಯ ಅಥವಾ ಇತರ ವ್ಯವಸ್ಥೆಯ ಯಾವುದೇ ಕರಾರು ಕೊನೆಗೊಂಡಿದೆಯೋ ಅಥವಾ ಯಾವ ವ್ಯಕ್ತಿಯು ಆ ಪ್ರಕರಣದ (4)ನೇ ಉಪ-ಪ್ರಕರಣದಲ್ಲಿ ಒಳಗೊಂಡಿರುವ ಉಪಬಂಧಗಳ ಕಾರಣದಿಂದಾಗಿ ಯಾವುದೇ ಪದವನ್ನು ಧಾರಣ ಮಾಡಿರುವುದು ನಿಂತುಹೋಗಿದೆಯೋ ಆ ಯಾರೇ ವ್ಯಕ್ತಿಯು ಆಡಳಿತದ ಅಥವಾ ಇತರ ವ್ಯವಸ್ಥೆಯ ಕರಾರು, ಅವಧಿಗೆ ಮುಂಚೆ ಕೊನೆಗೊಂಡಿರುವ ಅಥವಾ ತನ್ನ ಪದವನ್ನು ಕಳೆದುಕೊಂಡಿರುವ ಕಾರಣದಿಂದಾಗಿ ಯಾವುದೇ ನಷ್ಟ ಪರಿಹಾರ ಧನವನ್ನು ಕ್ಲೇಮು ಮಾಡಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

***6. ಸೊಸೈಟಿಯ ಆಡಳಿತವನ್ನು ಪರಿತ್ಯಜಿಸುವುದು.–** (1) 3ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ ಏನೇ ಇದ್ದರೂ, ಆ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಯಾವುದೇ ಸಮಯದಲ್ಲಿ ಸೊಸೈಟಿಯ ವ್ಯವಸ್ಥಾಪನೆಯನ್ನು ಕೇಂದ್ರ ಸರ್ಕಾರದಲ್ಲಿ ನಿಹಿತಗೊಳಿಸುವ ಉದ್ದೇಶಗಳು ಈಡೇರಿವೆ ಎಂದು ಅಥವಾ ಯಾವುದೇ ಇತರ ಕಾರಣಕ್ಕಾಗಿ ಸೊಸೈಟಿಯ ವ್ಯವಸ್ಥಾಪನೆಯನ್ನು ಕೇಂದ್ರ ಸರ್ಕಾರದಲ್ಲಿ ನಿಹಿತಗೊಳಿಸುವ ಅವಶ್ಯಕತೆ ಇಲ್ಲವೆಂದು ಆ ಸರ್ಕಾರಕ್ಕೆ ಕಂಡುಬಂದರೆ ಅದು

ರಾಜಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದ ದಿನಾಂಕದಿಂದ ಸೊಸೈಟಿಯ ವ್ಯವಸ್ಥಾಪನೆಯನ್ನು ಪರಿತ್ಯಜಿಸಬಹುದು.

* ದಿನಾಂಕ 29-4-99ರಿಂದ ಜಾರಿಗೆ ಬರುವಂತೆ ಲಲಿತಕಲಾ ಅಕಾಡಮಿಯ ವ್ಯವಸ್ಥಾಪನೆಯನ್ನು ಕೇಂದ್ರ ಸರ್ಕಾರವು ಈ ಮೂಲಕ ತ್ಯಜಿಸಿದೆ [ಎಸ್.ಒ.202 E ದಿನಾಂಕ: 31-3-1999 ನೋಡಿ]

(2) (1)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಂದು ಮತ್ತು ಅಂದಿನಿಂದ ಸೊಸೈಟಿಯ ಆಡಳಿತವು ಸೊಸೈಟಿಯ ಸಾಮಾನ್ಯ ಪರಿಷತ್ತಿನಲ್ಲಿ ನಿಹಿತಗೊಂಡಿರತಕ್ಕದ್ದು ಮತ್ತು ಅಂತಹ ವ್ಯವಸ್ಥಾಪನೆಯನ್ನು ಸೊಸೈಟಿಯ ನೋಂದಣಿ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ನಿರ್ವಹಿಸತಕ್ಕದ್ದು. ಆದಾಗ್ಯೂ, ಸೊಸೈಟಿಯ ವ್ಯವಸ್ಥಾಪನೆಯ ಸಂಬಂಧದಲ್ಲಿ ಕ್ರಮಗಳು ಯಾವುದಾದರೂ ಇದ್ದಲ್ಲಿ, ಅವುಗಳನ್ನು (1)ನೇ ಉಪ-ಪ್ರಕರಣದ ಮೇರೆಗಿನ ಆದೇಶವನ್ನು ಪ್ರಕಟಿಸಿದ ನಂತರ ತೆಗೆದುಕೊಳ್ಳಬಹುದು.

**7. 1860 ರ 21ನೇ ಅಧಿನಿಯಮದ ಅನ್ವಯ.**- (1) ಸೊಸೈಟಿಯ ನೋಂದಣಿ ಅಧಿನಿಯಮದಲ್ಲಿ ಅಥವಾ ಸೊಸೈಟಿಯ ಜ್ಞಾಪನ ಮತ್ತು ನಿಯಮ ಹಾಗೂ ವಿನಿಯಮಗಳಲ್ಲಿ ಏನೇ ಇದ್ದರೂ, ಆದರೆ 6ನೇ ಪ್ರಕರಣದ (2)ನೇ ಉಪ-ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಸೊಸೈಟಿಯ ವ್ಯವಸ್ಥಾಪನೆಯು ಎಲ್ಲಿಯವರೆಗೆ ಕೇಂದ್ರ ಸರ್ಕಾರದಲ್ಲಿ ನಿಹಿತಗೊಂಡಿರುತ್ತದೆಯೋ ಅಲ್ಲಿಯವರೆಗೆ-

(ಎ) ಸೊಸೈಟಿಯ ಸದಸ್ಯರಾಗಲಿ ಅಥವಾ ಯಾರೇ ಇತರ ವ್ಯಕ್ತಿಯಾಗಲಿ, ಸೊಸೈಟಿಯ ಸಾಮಾನ್ಯ ಪರಿಷತ್ತಿನ ಸದಸ್ಯನನ್ನಾಗಿ ಯಾರೇ ವ್ಯಕ್ತಿಯನ್ನು ನಾಮನಿರ್ದೇಶನ ಮಾಡುವುದು ಅಥವಾ ನೇಮಿಸುವುದು ಕಾನೂನು ಸಮ್ಮತವಾಗತಕ್ಕದ್ದಲ್ಲ;

(ಬಿ) ಈ ಅಧಿನಿಯಮ ಪ್ರಾರಂಭವಾದಂದು ಅಥವಾ ಆ ತರುವಾಯ ಸೊಸೈಟಿಯ ಸದಸ್ಯರ ಯಾವುದೇ ಸಭೆಯಲ್ಲಿ ಅಥವಾ ಸೊಸೈಟಿಯ ಸಾಮಾನ್ಯ ಪರಿಷತ್ತಿನ ಯಾವುದೇ ಸಭೆಯಲ್ಲಿ ಅಂಗೀಕರಿಸಲಾದ ಯಾವುದೇ ನಿರ್ಣಯವನ್ನು ಕೇಂದ್ರ ಸರ್ಕಾರವು, ಅದನ್ನು ಅನುಮೋದಿಸಿದ ಹೊರತು, ಜಾರಿಗೆ ತರತಕ್ಕದ್ದಲ್ಲ;

(ಸಿ) ಸೊಸೈಟಿಯ ವಿಘಟನೆಗಾಗಿ ಅಥವಾ ಅದನ್ನು ಯಾವುದೇ ಇತರ ಸೊಸೈಟಿಯೊಂದಿಗೆ ವಿಲೀನಗೊಳಿಸುವುದಕ್ಕಾಗಿ ಅಥವಾ ಅದರ ಆಡಳಿತ ಸಂಬಂಧದಲ್ಲಿ ರಿಸೀವರನನ್ನು ನೇಮಿಸುವುದಕ್ಕಾಗಿ ಇರುವ ಯಾವುದೇ ಕಾರ್ಯವಾಹಿಯನ್ನು, ಕೇಂದ್ರ ಸರ್ಕಾರದ ಅನುಮತಿ ಇದ್ದ ಹೊರತು ಯಾವುದೇ ನ್ಯಾಯಾಲಯದಲ್ಲಿ ಹೂಡಲು ಅವಕಾಶವಿರತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣದಲ್ಲಿ ಒಳಗೊಂಡಿರುವ ಉಪಬಂಧಗಳಿಗೆ ಒಳಪಟ್ಟು ಮತ್ತು ನಿಯಮಿಸಲಾದಂಥ ಇತರ ವಿನಾಯಿತಿಗಳು, ನಿರ್ಬಂಧಗಳು ಮತ್ತು ಪರಿಮಿತಿಗಳು ಯಾವುವಾದರೂ ಇದ್ದರೆ, ಅವುಗಳಿಗೆ ಒಳಪಟ್ಟು ಸೊಸೈಟಿಯ ನೋಂದಣಿ ಅಧಿನಿಯಮವು, ಈ ಅಧಿನಿಯಮವು ಪ್ರಾರಂಭವಾಗುವ ಮುಂಚೆ ಸೊಸೈಟಿಗೆ ಅನ್ವಯಿಸುತ್ತಿದ್ದ ರೀತಿಯಲ್ಲಿಯೇ ಅನ್ವಯಿಸುವುದು ಮುಂದುವರಿಯತಕ್ಕದ್ದು.

## ಅಧ್ಯಾಯ - III

### ಸಂಕೀರ್ಣ

**8. ದಂಡಗಳು.**- (ಎ) ಸೊಸೈಟಿಯ ಭಾಗವಾಗಿರುವ ಯಾವುದೇ ಸ್ವತ್ತನ್ನು ತನ್ನ ಸ್ವಾಧೀನದಲ್ಲಿ ಅಥವಾ ಅಭಿರಕ್ಷೆಯಲ್ಲಿ ಅಥವಾ ನಿಯಂತ್ರಣದಲ್ಲಿ ಹೊಂದಿದ್ದು ಅಂಥ ಸ್ವತ್ತನ್ನು ಆಡಳಿತಗಾರನಿಂದ ಅಥವಾ ಈ ಅಧಿನಿಯಮದ ಮೇರೆಗೆ ಪ್ರಾಧಿಕೃತನಾದ ಯಾರೇ ವ್ಯಕ್ತಿಯಿಂದ ಅದನ್ನು ಅಕ್ರಮವಾಗಿ ತಡೆಹಿಡಿದಿಟ್ಟುಕೊಂಡಿರುವ, ಅಥವಾ

(ಬಿ) ಅಂಥ ಯಾವುದೇ ಸ್ವತ್ತನ್ನು ಅಕ್ರಮವಾಗಿ ಪಡೆದುಕೊಂಡಿರುವ, ಅಥವಾ

(ಸಿ) ಸೊಸೈಟಿಯ ಭಾಗವಾಗಿರುವ ಯಾವುದೇ ಸ್ವತ್ತನ್ನು ಉದ್ದೇಶಪೂರ್ವಕವಾಗಿ ತಡೆದಿಟ್ಟುಕೊಂಡಿರುವ ಅಥವಾ ಅದನ್ನು ವಶಾವಣೆ ಮಾಡಲು ತಪ್ಪುವ ಅಥವಾ ಅದನ್ನು ತೆಗೆದುಹಾಕುವ ಅಥವಾ ನಾಶಗೊಳಿಸುವ; ಅಥವಾ

(ಡಿ) ತನ್ನ ಸ್ವಾಧೀನದಲ್ಲಿ ಅಥವಾ ಅಭಿರಕ್ಷೆಯಲ್ಲಿ ಅಥವಾ ನಿಯಂತ್ರಣದಲ್ಲಿರಬಹುದಾದ ಯಾವುದೇ ಪುಸ್ತಕಗಳು, ಕಾಗದ-ಪತ್ರಗಳು, ಕಲಾಕೃತಿಗಳು ಅಥವಾ ಇತರ ದಸ್ತಾವೇಜುಗಳನ್ನು ಉದ್ದೇಶಪೂರ್ವಕವಾಗಿ ತಡೆಹಿಡಿಯುವ ಅಥವಾ ಅವುಗಳ ಲೆಕ್ಕವನ್ನು ಆಡಳಿತಗಾರನಿಗೆ ಅಥವಾ ಈ ಅಧಿನಿಯಮದ ಮೇರೆಗೆ ಪ್ರಾಧಿಕೃತನಾದ ಯಾರೇ ವ್ಯಕ್ತಿಗೆ ನೀಡಲು ತಪ್ಪುವ; ಅಥವಾ

(ಇ) 4ನೇ ಪ್ರಕರಣದ (6)ನೇ ಉಪ-ಪ್ರಕರಣದಲ್ಲಿ ಉಪಬಂಧಿಸಿರುವಂತೆ ಮಾಹಿತಿ ಅಥವಾ ವಿವರಗಳನ್ನು ಯಾವುದೇ ಸೂಕ್ತ ಕಾರಣವಿಲ್ಲದೆ ಒದಗಿಸಲು ತಪ್ಪುವ, ಯಾರೇ ವ್ಯಕ್ತಿಯು,-

ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಇವೆರಡರಿಂದಲೂ ದಂಡನೀಯನಾಗತಕ್ಕದ್ದು.

**9. ಕಂಪನಿಗಳಿಂದ ಅಪರಾಧಗಳು.**- (1) ಈ ಅಧಿನಿಯಮದ ಮೇರೆಗಿನ ಒಂದು ಅಪರಾಧವನ್ನು ಒಂದು ಕಂಪನಿಯು ಮಾಡಿರುವಲ್ಲಿ, ಅಂತಹ ಅಪರಾಧವು ನಡೆದ ಕಾಲದಲ್ಲಿ ಆ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಅದರ ವ್ಯವಹಾರಗಳನ್ನು ನಡೆಸುವ ಬಗ್ಗೆ ಕಂಪನಿಗೆ ಹೊಣೆಗಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಮತ್ತು ಕಂಪನಿಯನ್ನು ಅಂತಹ ಅಪರಾಧದ ಬಗ್ಗೆ ಅಪರಾಧಿಯೆಂದು ಭಾವಿಸತಕ್ಕದ್ದು ಮತ್ತು ಆ ಪ್ರಕಾರ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ದಂಡನೀಯರಾಗತಕ್ಕದ್ದು :

ಪರಂತು, ಅಂತಹ ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂತಹ ಅಪರಾಧವು ನಡೆಯುವುದನ್ನು ತಡೆಗಟ್ಟಲು ತಾನು ಎಲ್ಲಾ ಯಥೋಚಿತ ಜಾಗರೂಕತೆಯನ್ನು ವಹಿಸಿದ್ದೆನೆಂದು ಅಂತಹ ಯಾರೇ ವ್ಯಕ್ತಿಯು ರುಜುವಾತು ಪಡಿಸಿದರೆ, ಈ ಉಪ-ಪ್ರಕರಣ ದಲ್ಲಿರುವುದಾವುದೂ ಅಂಥ ವ್ಯಕ್ತಿಯನ್ನು ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣದಲ್ಲಿ ಏನೇ ಇದ್ದರೂ, ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾರೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ಅಥವಾ ನಿರ್ಲಕ್ಷ್ಯತೆಯ ಕಾರಣದಿಂದ ನಡೆಯಿತೆಂದು ರುಜುವಾತಾದರೆ ಅಥವಾ ಅವರ ನಿರ್ಲಕ್ಷ್ಯತೆಯಿಂದ ಆಗಿರಬಹುದೆಂದು ಹೇಳಬಹುದಾಗಿದ್ದರೆ ಅಂತಹ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನೂ ಸಹ ಅಪರಾಧದ ಬಗ್ಗೆ ಅಪರಾಧಿ ಎಂದು ಭಾವಿಸತಕ್ಕದ್ದು ಮತ್ತು ತದನುಸಾರ ಅವರು ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ದಂಡನೀಯರಾಗತಕ್ಕದ್ದು.

**ವಿವರಣೆಗಳು:** - ಈ ಪ್ರಕರಣದ ಉದ್ದೇಶಗಳಿಗಾಗಿ,-

(ಎ) "ಕಂಪನಿ" ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಇದರಲ್ಲಿ ಫರ್ಮು ಅಥವಾ ಇತರ ವ್ಯಕ್ತಿಗಳ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಒಂದು ಫರ್ಮಿನ ಸಂಬಂಧದಲ್ಲಿ ,"ನಿರ್ದೇಶಕ", ಎಂದರೆ ಆ ಫರ್ಮಿನ ಪಾಲುದಾರ.

**10. ಅಧಿನಿಯಮದ ಪ್ರವರ್ತನೆಯ ಅವಧಿಯನ್ನು ಹೊರತುಪಡಿಸುವುದು.**- ಸೊಸೈಟಿಯ ವ್ಯವಸ್ಥಾಪನೆಗೆ ಸಂಬಂಧಿಸಿದಂತೆ ಯಾವುದೇ ವ್ಯವಹಾರದಿಂದ ಉದ್ಭವಿಸುವ ಯಾವುದೇ ವಿಷಯಕ್ಕೆ

ಸಂಬಂಧಪಟ್ಟಂತೆ ಸೊಸೈಟಿಯು ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆಯನ್ನು ಹೂಡಲು ಅಥವಾ ಅರ್ಜಿಯನ್ನು ಹಾಕಲು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನು ನಿಯಮಿಸಿರುವ ಕಾಲಪರಿಮಿತಿ ಅವಧಿಯನ್ನು ಲೆಕ್ಕಹಾಕುವಲ್ಲಿ ಈ ಅಧಿನಿಯಮವು ಜಾರಿಯಲ್ಲಿರುವ ಅವಧಿಯನ್ನು ಹೊರತುಪಡಿಸತಕ್ಕದ್ದು.

**11. ಅಧಿನಿಯಮವು ಅಧ್ಯಾರೋಹಿ ಪರಿಣಾಮ ಹೊಂದಿರುವುದು.**- ಈ ಅಧಿನಿಯಮದ ಉಪಬಂಧಗಳು ಅಥವಾ ಅದರ ಮೇರೆಗೆ ಮಾಡಿರುವ ಯಾವುದೇ ಅಧಿಸೂಚನೆ, ಆದೇಶ ಅಥವಾ ನಿಯಮ - ಇವುಗಳಿಗೆ ಈ ಅಧಿನಿಯಮವನ್ನು ಹೊರತುಪಡಿಸಿ ಯಾವುದೇ ಕಾನೂನಿನಲ್ಲಿ ಅಥವಾ ಈ ಅಧಿನಿಯಮವನ್ನು ಹೊರತುಪಡಿಸಿ ಇತರೆ ಯಾವುದೇ ಕಾನೂನಿನ ಕಾರಣದಿಂದಾಗಿ ಪರಿಣಾಮ ಹೊಂದಿರುವ ಯಾವುದೇ ಲಿಖಿತದಲ್ಲಿ ಅಥವಾ ಯಾವುದೇ ನ್ಯಾಯಾಲಯದ ಯಾವುದೇ ಡಿಕ್ರಿ ಅಥವಾ ಆದೇಶದಲ್ಲಿ ಅಸಂಗತವಾದುದು ಏನೇ ಇದ್ದರೂ, ಅವು ಪರಿಣಾಮ ಹೊಂದಿರತಕ್ಕದ್ದು.

**12. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.**- (1) ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಯಾವುದೇ ಕಾರ್ಯಕ್ಕಾಗಿ ಆಡಳಿತಗಾರ ಅಥವಾ ಕೇಂದ್ರ ಸರ್ಕಾರದ ಯಾರೇ ಅಧಿಕಾರಿ ಅಥವಾ ಯಾರೇ ಇತರ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

(2) ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಯಾವುದೇ ಕಾರ್ಯದಿಂದ ಉಂಟಾದ ಅಥವಾ ಉಂಟಾಗುವ ಸಂಭವವಿರುವ ಯಾವುದೇ ಹಾನಿಗಾಗಿ ಕೇಂದ್ರ ಸರ್ಕಾರದ ವಿರುದ್ಧ ಅಥವಾ ಕೇಂದ್ರ ಸರ್ಕಾರದ ಆಡಳಿತಗಾರ ಅಥವಾ ಯಾರೇ ಅಧಿಕಾರಿಯ ಅಥವಾ ಯಾರೇ ಇತರ ವ್ಯಕ್ತಿಯ ವಿರುದ್ಧ ಯಾವುದೇ ದಾವೆ ಅಥವಾ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

**13. ದುರ್ಭಾವನೆಯಿಂದ ಮಾಡಿರುವ ಕರಾರುಗಳನ್ನು ರದ್ದುಗೊಳಿಸಬಹುದು ಅಥವಾ ವ್ಯತ್ಯಸ್ತಗೊಳಿಸಬಹುದು.**- ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ನಿಕಟಪೂರ್ವದ ಒಂದು ವರ್ಷದ ಒಳಗೆ ಯಾವುದೇ ಸಮಯದಲ್ಲಿ ಸೊಸೈಟಿ ಮತ್ತು ಯಾರೇ ಇತರ ವ್ಯಕ್ತಿಯ ನಡುವೆ ಸೊಸೈಟಿಯ ವ್ಯವಸ್ಥಾಪನೆಗೆ ಸಂಬಂಧ ಪಡುವಷ್ಟರ ಮಟ್ಟಿಗೆ ಮಾಡಿಕೊಳ್ಳಲಾದ ಯಾವುದೇ ಕರಾರು ಅಥವಾ ಒಪ್ಪಂದವನ್ನು ದುರ್ಭಾವನೆಯಿಂದ ಅಥವಾ ಸೊಸೈಟಿಯ ಹಿತಾಸಕ್ತಿಗೆ ಬಾಧಕವಾಗುವ ರೀತಿಯಲ್ಲಿ ಮಾಡಿಕೊಳ್ಳಲಾಗಿದೆ ಎಂದು ಕೇಂದ್ರ ಸರ್ಕಾರಕ್ಕೆ ತಾನು ಸೂಕ್ತವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸಿದ ತರುವಾಯ ಮನದಟ್ಟಾದರೆ ಅದು ಸೊಸೈಟಿಯ ಕರಾರನ್ನು ಅಥವಾ ಒಪ್ಪಂದವನ್ನು (ಬೇಷರತ್ತಾಗಿ ಅಥವಾ ವಿಧಿಸುವುದು ತಾನು ಸೂಕ್ತವೆಂದು ಭಾವಿಸುವಂತಹ ಷರತ್ತುಗಳಿಗೆ ಒಳಪಟ್ಟು) ರದ್ದುಪಡಿಸುವ ಅಥವಾ ವ್ಯತ್ಯಸ್ತಗೊಳಿಸುವ ಆದೇಶವನ್ನು ಮಾಡಬಹುದು ಮತ್ತು ಆ ತರುವಾಯ ಕರಾರು ಅಥವಾ ಒಪ್ಪಂದವು ತದನುಸಾರವಾಗಿ ಪರಿಣಾಮಹೊಂದಿರತಕ್ಕದ್ದು:

ಪರಂತು, ಕರಾರಿನ ಅಥವಾ ಒಪ್ಪಂದದ ಪಕ್ಷಕಾರರಿಗೆ ತಮ್ಮ ಅಹವಾಲನ್ನು ಹೇಳಿಕೊಳ್ಳಲು ಒಂದು ಸೂಕ್ತ ಅವಕಾಶ ನೀಡಿದ ಹೊರತು, ಅಂತಹ ಯಾವುದೇ ಕರಾರನ್ನು ಅಥವಾ ಒಪ್ಪಂದವನ್ನು ರದ್ದು ಪಡಿಸತಕ್ಕದ್ದಲ್ಲ ಅಥವಾ ವ್ಯತ್ಯಸ್ತಗೊಳಿಸತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣದ ಮೇರೆಗಿನ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು ಅಂತಹ ಆದೇಶದ ವ್ಯತ್ಯಸ್ತಕ್ಕಾಗಿ ಅಥವಾ ವಿಪರ್ಯಯಕ್ಕಾಗಿ ದೆಹಲಿಯಲ್ಲಿರುವ ಉಚ್ಚನ್ಯಾಯಾಲಯಕ್ಕೆ ಒಂದು ಅರ್ಜಿಯನ್ನು ಸಲ್ಲಿಸಬಹುದು ಮತ್ತು ಆ ತರುವಾಯ ಅಂತಹ ನ್ಯಾಯಾಲಯವು ಅಂತಹ ಆದೇಶವನ್ನು ಸ್ಥಿರೀಕರಿಸಬಹುದು, ಮಾರ್ಪಾಟುಗೊಳಿಸಬಹುದು ಅಥವಾ ವಿಪರ್ಯಯಗೊಳಿಸಬಹುದು.

**14. ಉದ್ಯೋಗದ ಕರಾರನ್ನು ಕೊನೆಗೊಳಿಸುವ ಅಧಿಕಾರ.**- ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಯಾವುದೇ ಸಮಯದಲ್ಲಿ ಸೊಸೈಟಿಯ ವ್ಯವಸ್ಥಾಪನೆಗೆ ಸಂಬಂಧಿಸಿದಂತೆ, ಸೊಸೈಟಿಗೆ ಮಾಡಿಕೊಳ್ಳಲಾದ ಉದ್ಯೋಗದ ಯಾವುದೇ ಕರಾರು ತೀವ್ರ ದುರ್ಭರವಾದುದೆಂದು ಆಡಳಿತಗಾರನು ಅಭಿಪ್ರಾಯಪಟ್ಟರೆ,

ಅವನು ಆ ನೌಕರನಿಗೆ ಒಂದು ತಿಂಗಳ ಲಿಖಿತ ನೋಟೀಸನ್ನು ನೀಡುವ ಮೂಲಕ ಅಥವಾ ಅದರ ಬದಲಿಗೆ ಒಂದು ತಿಂಗಳ ವೇತನ ಅಥವಾ ಮಜೂರಿಯನ್ನು ನೀಡುವ ಮೂಲಕ ಉದ್ಯೋಗದ ಅಂತಹ ಕರಾರನ್ನು ಕೊನೆಗೊಳಿಸಬಹುದು.

**15. ನಿಯಮ ರಚನಾಧಿಕಾರ.–** (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉಪಬಂಧಗಳನ್ನು ಈಡೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ಮಾಡಿದ ತರುವಾಯ ಸಾಧ್ಯವಾದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಥವಾ ಎರಡು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳವರೆಗೆ ಇರಿಸತಕ್ಕದ್ದು ಮತ್ತು ಅದನ್ನು ಹಾಗೆ ಇರಿಸಿದ ಅಧಿವೇಶನವು ಅಥವಾ ಅದರ ನಿಕಟ ತರುವಾಯದ ಅಧಿವೇಶನವು ಮುಗಿಯುವುದಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ, ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ನಿಯಮವು ಆ ತರುವಾಯ ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೀತಿಯಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿ ಯಾಗತಕ್ಕದ್ದಲ್ಲ; ಆದರೆ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಈ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ವಿಷಯದ ಕಾನೂನಿನ ಮಾನ್ಯತೆಗೆ ಬಾಧಕವಾಗತಕ್ಕದ್ದಲ್ಲ.

**16. ನಿರಸನ ಮತ್ತು ಉಳಿಸುವಿಕೆ.–** (1) ಲಲಿತಕಲಾ ಅಕಾಡಮಿ (ವ್ಯವಸ್ಥಾಪನೆಯನ್ನು ವಹಿಸಿಕೊಳ್ಳುವಿಕೆ) ಅಧ್ಯಾದೇಶ, 1997ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಲಲಿತಕಲಾ ಅಕಾಡಮಿ (ವ್ಯವಸ್ಥಾಪನೆಯನ್ನು ವಹಿಸಿಕೊಳ್ಳುವಿಕೆ) ಅಧ್ಯಾದೇಶ, 1997ನ್ನು, ಹಾಗೆ ನಿರಸನಗೊಳಿಸಿದ್ದರೂ, ಸದರಿ ಅಧ್ಯಾದೇಶದ ಮೂಲಕ ಮಾಡಲಾದ ಯಾವುದೇ ಕೃತ್ಯ ಅಥವಾ ಕೈಗೊಂಡ ಯಾವುದೇ ಕ್ರಮವು ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಮಾಡಲಾಗಿದೆಯೆಂದು ಅಥವಾ ಕೈಗೊಳ್ಳಲಾಗಿದೆಯೆಂದು ಭಾವಿಸತಕ್ಕದ್ದು.

* * * *